## ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಜಿಎಂ\1530\2019\ಉನಿವಿ–4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:03/08/2020

### ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಗದಗ ಜಿಲ್ಲೆ ರೋಣ ಹೆಸ್ಕಾಂ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಾದ 1) ಶ್ರೀ.ಚೇತನ್ ಕುಮಾರ್ ಹಾದಿಮನಿ.ಎಸ್ ಮತ್ತು 2) ಶ್ರೀ.ನಿಖಿಲ್ @ ಮಹೇಶ್ ದುಗ್ಗಾಣಿ, ಕಾರ್ಯ ಮತ್ತು ಪಾಲನೆ ಉಪವಿಭಾಗ ರವರುಗಳ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ.

******

ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕ್ ಗುಡಿಸಾಗರ ನಿವಾಸಿಯಾದ ಶ್ರೀ.ವಿ.ಎಸ್.ಕುಲಕರ್ಣಿ [ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ] ರವರು ಗದಗ ಜಿಲ್ಲೆ ರೋಣ ಹೆಸ್ಕಾಂ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಚೇತನ್ ಕುಮಾರ್ ಹಾದಿಮನಿ.ಎಸ್ [ಇನ್ನು ಮುಂದೆ, '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ' ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಕೆಪಿಟಿಸಿಎಲ್ ನಿಯಮಾವಳಿ ಪ್ರಕಾರ ಹೆಸ್ಕಾಂ ಕಂಬಗಳಲ್ಲಿ ಕೇಬಲ್ ಎಳೆಯಲು ಪ್ರತಿ ವರ್ಷಕ್ಕೆ ಒಂದು ಕಂಬಕ್ಕೆ ₹100/–ಗಳನ್ನು ಆಕರಣೆ ಮಾಡಬೇಕಿದ್ದು, ಎದುರುದಾರರು ರೋಣ ಉಪವಿಭಾಗದ ವ್ಯಾಪ್ತಿಯಲ್ಲಿ ಸಂಬಂಧಪಟ್ಟವರಿಗೆ ನಿಗಧಿತ ಶುಲ್ಕವನ್ನು ಆಕರಣೆ ಮಾಡದೇ ಇರುವುದರಿಂದ, ಸದರಿಯವರು ಭ್ರಷ್ಟಾಚಾರ ಎಸಗಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆಯೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

"(1) ಶ್ರೀ ಚೇತನ ಕುಮಾರ್ ಹಾದಿಮನಿ ಎಸ್ ಆದ ನಾನು ದಿನಾಂಕ:19–3–2018 ರವರೆಗೆ 33 ಕೆ.ವ್ಹಿ.ಎಸ್&ಎಲ್ ವಿಭಾಗ ತಬಿಬಲ್ಯಾಂಡ್ ಹುಬ್ಬಳ್ಳಿಯಲ್ಲಿ ಕಾರ್ಯನಿರ್ವಹಿಸಿದ್ದು ಇದ್ದು ಉಲ್ಲೇಖ(3) ರನ್ವಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು

ಪಾಲನ ವಿಭಾಗ ರೋಣದಲ್ಲಿ ವರದಿ ಮಾಡಿಕೊಂಡಿದ್ದು ಇದ್ದು ಸದರಿ ಮಾಹಿತಿಯ ಪ್ರತಿಯನ್ನು ಈ ಪತ್ರದೊಂದಿಗೆ ತಮ್ಮ ಆದ್ಯ ಮಾಹಿತಿಗಾಗಿ ಲಗತ್ತಿಸಲಾಗಿದೆ.

(2) ಉಲ್ಲೇಖ-2 ರನ್ವಯ ಫಿರ್ಯಾದಿ ಸಲ್ಲಿಸಿದ ದಾಖಲಾತಿಗಳ ವಿವರಣೆಯು ಸದರಿ ರೋಣ ತಾಲೂಕಿನ ನ್ಯಾಯಾಂಗ ಆಡಳಿತವನ್ನು ರೋಣ ಉಪ ವಿಭಾಗದಲ್ಲಿ ಹಾಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಆಗಿ ಶ್ರೀ ನಿಖಿಲ್ ದುಗ್ಗಾಣಿ ಅವರು ಕಾರ್ಯ ಮತ್ತು ಪಾಲನ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವರು.

(3) ಸದರಿ ಫಿರ್ಯಾದಿಯು ಕೇಳಿದ ಮಾಹಿತಿಯು ರೋಣ ತಾಲೂಕಿನ ಎಲ್ಲಾ ಗ್ರಾಮಗಳ ಲೈನಮ್ಯಾನ್ ಹಾಗೂ ಅಧಿಕಾರಿಗಳ ಬಗ್ಗೆ ಇದ್ದು ಹಾಗೂ ಈ ಎಲ್ಲಾ ಅಹವಾಲುಗಳನ್ನು ಸದರಿ ರೋಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನ ಉಪ ವಿಭಾಗ ರೋಣ ರವರಿಂದ ಪಡೆಯಬೇಕೆಂದು ತಮ್ಮಲ್ಲಿ ಕೋರುತ್ತಾ ಹಾಗೂ ಫಿರ್ಯಾದಿಯು ತಮಗೆ ಸಲ್ಲಿಸಿದ ಪತ್ರದಲ್ಲಿ ರೋಣ ಉಪ-ವಿಭಾಗದ ಕಂಬಗಳಿಗೆ ಒ.ಎಫ್.ಸಿ ಕೇಬಲ್ ಹಾಕುವುದಕ್ಕೆ ಹಣವನ್ನು ಸಂದಾಯಿಸಿರುವ ಬಗ್ಗೆ ಇದ್ದು, ಈ ಮಾಹಿತಿಯು ರೋಣ ಉಪ-ವಿಭಾಗದ ನ್ಯಾಯಾಂಗ ಆಡಳಿತ ವ್ಯಾಪ್ತಿಯಲ್ಲಿ ಬರುತ್ತಿದ್ದು, ಹಾಗೂ ರೋಣ ಉಪ-ವಿಭಾಗ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಸದರಿ ಮಾಹಿತಿಯು ತಮಗೆ ಅವಶ್ಯವಿರುವ ರೋಣ ಉಪ-ವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನ ಉಪ ವಿಭಾಗ ರೋಣ ರವರಿಂದ ಪಡೆಯಬೇಕೆಂದು ಕೋರಲಾಗಿದೆ.

ಈ ಮೇಲಿನ ವಿಷಯಗಳನ್ನು ತಮ್ಮ ಅವಗಾಹನೆಗಾಗಿ ತರುತ್ತಾ ಶ್ರೀ ವಿ.ಎಸ್.ಕುಲಕರ್ಣಿ ಸಾ॥ ಗುಡಿಸಾಗರ ತಾ॥ ನವಲಗುಂದ ಇವರ ದೂರು ಅರ್ಜಿಯಲ್ಲಿ ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿದ್ದು, ಸದರಿಯವರು ನನ್ನ ಮೇಲೆ ಸುಳ್ಳು ಆಪಾದನೆಗಳನ್ನು ಮಾಡುತ್ತಿದ್ದು, ಈ ಮೇಲಿನ ಅಂಶಗಳಿಂದ ತಿಳಿದುಬರುತ್ತದೆ. ಹಾಗೂ ನನ್ನ ವೈಯಕ್ತಿಕ ಹೆಸರಿನ ಮೇಲೆ ಇರುವ ದೂರನ್ನು ತೆಗೆಯಬೇಕೆಂದು ತಮ್ಮಲ್ಲಿ ಕೋರುತ್ತೇನೆ." ಎಂದು ಹೇಳಿದ್ದಾರೆ.

4. ರೋಣ ಉಪವಿಭಾಗವು ಶ್ರೀ.ನಿಖಿಲ್ @ ಮಹೇಶ್ ದುಗ್ಗಾಣಿ, ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಕಾರ್ಯ ಮತ್ತು ಪಾಲನೆ ಉಪ ವಿಭಾಗ ರವರ ವ್ಯಾಪ್ತಿಗೊಳಪಡುವುದರಿಂದ, ಸದರಿಯವರನ್ನು 2ನೇ ಎದುರುದಾರರನ್ನಾಗಿ ಸೇರಿಸಿ, ಸದರಿಯವರಿಂದ ಆಕ್ಷೇಪಣೆಯನ್ನು ಕೇಳಲಾಯಿತು. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

"ಈ ವಿಷಯದನ್ವಯ ಈಗಾಗಲೇ ರೋಣ ಉಪ-ವಿಭಾಗಕ್ಕೆ ಸಂಬಂಧಪಟ್ಟ ರೋಣ, ಬೆಳವಣಿಕಿ, ನರೇಗಲ್ ಮತ್ತು ಹೊಳೆಆಲೂರು, ಶಾಖೆಗಳಲ್ಲಿನ ವಿದ್ಯುತ್ ಕಂಬಗಳನ್ನು ಅಳವಡಿಸಿರುವ ಟಿ.ವಿ. ಕೇಬಲ್ ಮಾಲೀಕರಿಗೆ ದಿ: 29-1-2019, 27-4-2019 ಮತ್ತು 25-6-2019ರ ನೋಟೀಸನ್ನು ಜಾರಿಗೊಳಿಸಲಾಗಿದೆ ಮತ್ತು ಕಂಬಗಳಿಗೆ ಅನಧಿಕೃತವಾಗಿ ಅಳವಡಿಸಿರುವ ಟಿ.ವಿ, ಕೇಬಲ್‌ಗಳನ್ನು ತೆರವುಗೊಳಿಸಲಾಗಿದೆ. ಮುಂದುವರೆದು ಸದರಿ ವಿಷಯಕ್ಕೆ

ಸಂಬಂಧಿಸಿದಂತೆ, ಹೆಸ್ಕಾಂ ಜಾಗೃತದಳ ರವರಿಗೆ ದಿ: 11-10-2019 ರ ಪತ್ರ/ ಇ-ಮೇಲ್ ಕಳುಹಿಸಿ ಕಾನೂನು ಕ್ರಮ ಜರುಗಿಸುವಂತೆ ತಿಳಿಸಲಾಗಿದೆ." ಎಂದು ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಹೆಸ್ಕಾಂ ವಿತರಣಾ ಕಂಬಗಳ ಮೇಲೆ ಖಾಸಗಿ ಟಿ.ವಿ ಕೇಬಲ್ ಆಪರೇಟರ್‌ಗಳಿಗೆ ಟಿ.ವಿ/ ಕಮ್ಯುನಿಕೇಶನ್ ಕೇಬಲ್ ಎಳೆಯಲು ಅನುಮತಿ ಕೊಡುವ ಬಗ್ಗೆ ಅಧೀಕ್ಷಕ ಅಭಿಯಂತರರು, ಕಾರ್ಯ ಮತ್ತು ಪಾಲನೆ ವೃತ್ತ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ಹುಬ್ಬಳ್ಳಿ ರವರ ಆದೇಶ ಈ ಕೆಳಗಿನಂತಿದೆ-

*"ಸಂಖ್ಯೆ: ಹುವಿಕಂ/ಇ.ಇ.-4/04-05*

*ದಿನಾಂಕ*

*ವಿಷಯ: ಹೆಸ್ಕಾಂ ಕಂಬಗಳ ಮೇಲೆ ಖಾಸಗಿ ಟಿ.ವಿ ಕೇಬಲ್ ಆಪರೇಟರಗಳಿಗೆ ಟಿ.ವಿ. ಕೇಬಲ್ ಎಳೆಯಲು ಅನುಮತಿ ಕೊಡುವದು.*

*ಪೀಠಿಕೆ:*

*3) ಪ್ರಧಾನ ವ್ಯವಸ್ಥಾಪಕರ (ತಾಂ) ಕ.ವಿ.ಪ್ರ.ನಿ.ನಿ. ಬೆಂಗಳೂರು ಹೊರಡಿಸಿದ ಸುತ್ತೋಲೆ ಸಂ: ಕೆಪಿಟಿಸಿಎಲ್/ಬಿ-31/ಎಸ್.ಇ.ಇ/ಐ.ಟಿ./ಎಂ.ಐ.ಎಸ್/56/2003-04, ದಿ:21/07/04 ನ ಪ್ರಕಾರ ಸಂಬಂಧಪಟ್ಟ ಅಧೀಕ್ಷಕ ಇಂಜಿನಿಯರ (ವಿ) ಕಾರ್ಯ ಮತ್ತು ಪಾಲನೆ ವೃತ್ತ ಇವರು "ನೋಡಲ್ ಆಫೀಸರ" ಅಂತಾ ನಾಮಕರಣ ಮಾಡಲಾಗಿದೆ.*

*4) ಹೆಸ್ಕಾಂ ಕಂಬಗಳ ಮೇಲೆ ಖಾಸಗಿ ಟಿ.ವಿ. ಆಪರೇಟರಗಳಿಗೆ ಟಿ.ವಿ. ಕೇಬಲ್ ಎಳೆಯಲು ಅನುಮತಿ ಕೊಡುವ ಅಧಿಕಾರ ಹಾಗೂ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ಕಚೇರಿ ಟಿಪ್ಪಣಿ ದಿನಾಂಕ: 11/10/04.*

*ಆದೇಶ*

*ಸಂಖ್ಯೆ: ಹುವಿಕಂ/ಇ.ಇ.-4/04-05* *ದಿನಾಂಕ 23 ಫೆಬ್ರವರಿ 2005*

*ಕಾರ್ಯ ಮತ್ತು ಪಾಲನೆ ವೃತ್ತದ ಅಧೀಕ್ಷಕ ಇಂಜಿನಿಯರ (ವಿ) ಇವರಿಗೆ ತಮ್ಮ ವೃತ್ತದಲ್ಲಿ ಖಾಸಗಿ ಕೇಬಲ್ ಆಪರೇಟರಗಳಿಗೆ ಹೆಸ್ಕಾಂ ವಿತರಣ ಕಂಬಗಳ ಮೇಲೆ ಟಿ.ವಿ/ ಕಮ್ಯುನಿಕೇಶನ್ ಕೇಬಲ್ ಎಳೆಯಲು ಕೆಳಗಿನ ಷರತ್ತುಗಳೊಂದಿಗೆ ಪರವಾನಿಗೆ ಕೊಡುವ ಅಧಿಕಾರವನ್ನು ಕೊಡಲಾಗಿದೆ.*

*5) ಹೊಸ ಅರ್ಜಿದಾರರಿಗೆ ಪ್ರತಿ ಕಂಬಕ್ಕೆ ಪ್ರತಿ ವರ್ಷಕ್ಕೆ ರೂ.100.00 ರಂತೆ ಕಂಬಗಳ ಮೇಲೆ ಕೇಬಲ್ ಎಳೆಯಲು ಹಕ್ಕಿಗಾಗಿ (Towards right of way) ಆಕರಣೆ ಮಾಡುವುದು."*

2) ಸದರಿ ಆದೇಶದನ್ವಯ ಖಾಸಗಿ ಕೇಬಲ್ ಆಪರೇಟರ್‌ಗಳು ಹೆಸ್ಕಾಂ ವಿತರಣಾ ಕಂಬಗಳ ಮೇಲೆ ಟಿ.ವಿ \ ಕಮ್ಯುನಿಕೇಶನ್ ಕೇಬಲ್ ಎಳೆಯಲು ಹೊಸ ಅರ್ಜಿದಾರರಿಗೆ ಪ್ರತಿ ವರ್ಷಕ್ಕೆ ಪ್ರತಿ ಕಂಬಕ್ಕೆ ₹100/–ರಂತೆ ಆಕರಣೆ ಮಾಡಬೇಕು;

3) ಮುಂದುವರೆದು, ಹೆಸ್ಕಾಂ ವಿತರಣಾ ಕಂಬಗಳ ಮೇಲೆ ಅಳವಡಿಸಿದ ಟಿ.ವಿ ಕೇಬಲ್‌ಗಳನ್ನು ಪ್ರತಿ ತಿಂಗಳು ಪರಿವೀಕ್ಷಣೆ ಮಾಡಬೇಕೆಂದು ಸೂಚಿಸಿ ವ್ಯವಸ್ಥಾಪಕ ನಿರ್ದೇಶಕರು (ತಾಂತ್ರಿಕ), ಕೆ.ಪಿ.ಟಿ.ಸಿ.ಎಲ್. ಬೆಂಗಳೂರು ರವರು ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ ರವರಿಗೆ ಸೂಚಿಸಿ ದಿನಾಂಕ:27–7–2004ರ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಸದರಿ ಸುತ್ತೋಲೆ ಈ ಕೆಳಗಿನಂತಿದೆ–

**"KARNATAKA POWER TRANSMISSION CORPORATION LIMITED**

No.KPTCL/BSI/SEE/IT/1663/60/2004-05

Corporate Office
KPTCL,Kaveri Bhavan,
Bangalore,
Dated, 27-07-2004

Sub:-Monthly inspection report for che cking TV cables on distribution poles.

Ref:-1) This office circular No.KPTCL/BBI/SEE/IT & MIS/56/ 2003 – 04 dt: 21-07-2004.
2) This office circular No.KPTCL/BBI/SEE/IT & MIS/56/2003-04 dt: 22-07-2004.

In continution to the above circulars, I am directed to request you to obtain the monthly reports from the field officers as per the format enclosed for checking the TV cables on Distribution poles to avoid electrical accidents. The consolidated report may please be sent to KPTCL for reference. The report may be sent before 1st of ever month.

Sd/-
General Manager (Technical)
KPTCL, Bangalore"

4) ಸದರಿ ಸುತ್ತೋಲೆಯನ್ವಯ ವಿದ್ಯುತ್ ಕಂಬಗಳಿಗೆ ಅಳವಡಿಸಿದ ಟಿ.ವಿ ಕೇಬಲ್‌ಗಳನ್ನು ಸಂಬಂಧಪಟ್ಟ ಕ್ಷೇತ್ರ ಅಧಿಕಾರಿಯು ಪ್ರತಿ ತಿಂಗಳು ಪರಿವೀಕ್ಷಿಸಿ ಮುಂದಿನ ತಿಂಗಳ ಒಂದನೇ ದಿನಾಂಕದೊಳಗಾಗಿ ಸಂಬಂಧಪಟ್ಟವರಿಗೆ ವರದಿಯನ್ನು ಸಲ್ಲಿಸಬೇಕು;

5) ಸದರಿ ಆದೇಶ ಮತ್ತು ಸುತ್ತೋಲೆಯನ್ವಯ, ಸದರಿ ದೂರಿನಲ್ಲಿ ಹೆಸ್ಕಾಂ ಉಪ ವಿಭಾಗ, ರೋಣ ವ್ಯಾಪ್ತಿಯಲ್ಲಿ ಖಾಸಗಿ ಕೇಬಲ್ ಆಪರೇಟರಗಳು ಹೆಸ್ಕಾಂ ವಿತರಣಾ ಕಂಬಗಳ ಮೇಲೆ ಟಿವಿ/ ಕಮ್ಯುನಿಕೇಶನ್ ಕೇಬಲ್‌ಗಳನ್ನು ಎಳೆಯುವ ಹಕ್ಕಿಗಾಗಿ ಸದರಿಯವರುಗಳಿಗೆ ಪ್ರತಿ ವರ್ಷಕ್ಕೆ ಪ್ರತಿ ಕಂಬಕ್ಕೆ ₹100/–ರಂತೆ ಆಕರಣೆ ಮಾಡದೇ ಇರುವುದು ಹಾಗೂ ಸದರಿ ವಿತರಣಾ ಕಂಬಗಳಿಗೆ

ಅಳವಡಿಸಿದ ಟಿ.ವಿ ಕೇಬಲ್‌ಗಳನ್ನು ಪ್ರತಿ ತಿಂಗಳು ಪರಿವೀಕ್ಷಣೆ ಮಾಡದೇ ಇರುವುದು ಕಂಡು ಬಂದಿದೆ;

6) ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾ.ಸಂ.ಅ), ಹೆಸ್ಕಾಂ ಹುಬ್ಬಳ್ಳಿ ರವರ ಅಧಿಕೃತ ಜ್ಞಾಪನ ದಿನಾಂಕ:7–3–2018 ರನ್ವಯ 1ನೇ ಎದುರುದಾರರು ಕಾರ್ಯ ಮತ್ತು ಪಾಲನೆ ವಿಭಾಗ ಕಛೇರಿ, ಹೆಸ್ಕಾಂ, ರೋಣ ಇಲ್ಲಿಗೆ ವರ್ಗವಾಗಿ ಬಂದು ದಿನಾಂಕ:19–3–2018 ರಂದು ಪೂರ್ವಾಹ್ನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್), ಕಾರ್ಯ ಮತ್ತು ಪಾಲನೆ ವಿಭಾಗ, ಹೆಸ್ಕಾಂ ರೋಣ ಈ ಹುದ್ದೆಯ ಅಧಿಕಾರ ಹಸ್ತಾಂತರವನ್ನು ಪಡೆದಿದ್ದಾರೆ;

7) 2ನೇ ಎದುರುದಾರರ ಸೇವಾ ವಿವರದನ್ವಯ ಸದರಿಯವರು ದಿನಾಂಕ:11–9–2017 ರಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್), ಕಾರ್ಯ ಮತ್ತು ಪಾಲನೆ ವಿಭಾಗ, ಹೆಸ್ಕಾಂ ರೋಣ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

8) ಮೇಲಿನ ಖಂಡಿಕೆಗಳಲ್ಲಿ ಹೇಳಿದ ಆದೇಶ ಮತ್ತು ಸುತ್ತೋಲೆಯನ್ನು ಸದರಿಯವರು ಪಾಲನೆ ಮಾಡಿದ ಬಗ್ಗೆ ದಾಖಲೆಗಳಿಲ್ಲ. ದೂರಿನಲ್ಲಿ ಆಕ್ಷೇಪಣೆ ಕೇಳಿ ನೋಟೀಸ್ ನೀಡಿದ ನಂತರ 2ನೇ ಎದುರುದಾರರು ಕೇಬಲ್ ಆಪರೇಟರ್‌ಗೆ ನೋಟೀಸ್‌ಗಳನ್ನು ನೀಡಿರುವುದು ಕಂಡು ಬಂದಿದೆ. ಕಾರಣ, ಎದುರುದಾರರುಗಳ ಕರ್ತವ್ಯ ಲೋಪ ಮೇಲ್ನೋಟಕ್ಕೆ ಸಾಬೀತಾಗಿದೆ. ಎದುರುದಾರರುಗಳು ಸದರಿ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

7. 1 ಮತ್ತು 2ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿದೆ.

8. ಅದಲ್ಲದೆ, ಎದುರುದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಎಸಗಿರುವುದು ಕಂಡು

ಬರುವುದರಿಂದ, ಸದರಿಯವರುಗಳ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಸದರಿಯವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕರ್ನಾಟಕ ವಿದ್ಯುತ್ ಮಂಡಳಿ ನೌಕರರ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1987ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 3/8

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ–1,**
**ಕರ್ನಾಟಕ ರಾಜ್ಯ.**